# ಕನ್ನಡ ಸಾಹಿತ್ಯದಲ್ಲಿ ಮಹಿಳಾ ಪ್ರತಿಫಲನದ ಮಾದರಿಗಳು.

ಪುನೀತ್ ಕುಮಾರ್ ಹೆಚ್ ಆರ್,
ಸಂಶೋಧನಾ ವಿದ್ಯಾರ್ಥಿ,
ಫೀಲ್ಡ್ ಮಾರ್ಷಲ್ ಕೆ ಎಂ ಕಾರ್ಯಪ್ಪ ಕಾಲೇಜು, ಮಡಿಕೇರಿ,
ಮಂಗಳೂರು ವಿಶ್ವವಿದ್ಯಾನಿಲಯ,
ಇಮೇಲ್: puneethkummi5599@gmail.com

ಪ್ರಾಚೀನ ಭಾರತೀಯ ಸ್ತ್ರೀಯ ಇತಿಹಾಸವು ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳ ಆಧಾರದಲ್ಲಿ ರೂಪಗೊಂಡಿದೆ. ಮುಖ್ಯವಾಗಿ ವೇದಯುಗ, ವೀರಕಾವ್ಯಗಳಯುಗ, ಉಪನಿಷತ್ತು ಹಾಗೂ ಸೂತ್ರಯುಗಳೆಂದು ಅವುಗಳನ್ನು ಕರೆಯಲಾಗಿದೆ. ಈ ಕಾಲ ಘಟ್ಟದಲ್ಲಿ ಮಹಿಳೆ ತನ್ನ ಜೀವನದಲ್ಲಿ ಸಾಧಿಸಿದ ಮುನ್ನಡೆ ಅಥವಾ ಅನುಭವಿಸಿದ ಸುಖ-ದುಃಖಗಳ ನಡೆಯನ್ನು ಕಂಡುಕೊಳ್ಳುವುದು ಆವಶ್ಯಕವಾಗಿದೆ. ಮುಖ್ಯವಾಗಿ ವೇದಕಾಲದ ಮತ್ತು ಪುರಾಣ ಕಾಲದ ಸ್ತ್ರೀ ಪಾತ್ರಗಳನ್ನು ಇಲ್ಲಿ ವಿವರಿಸಿದ್ದಾರೆ. ಅದರಲ್ಲೂ ರಾಮಾಯಣ ಹಾಗೂ ಮಹಾಭಾರತದಲ್ಲಿನ ಸ್ತ್ರೀ ಪಾತ್ರಗಳನ್ನು ವಸ್ತುವಾಗಿಸಿಕೊಂಡು ಬಂದ ಕಾದಂಬರಿಗಳಲ್ಲಿ ಅನಾವರಣಗೊಂಡ ಸ್ತ್ರೀ ಪಾತ್ರಗಳನ್ನು ಸ್ತ್ರೀ ವಾದಿ ನೆಲೆಯ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ. ರಾಮಾಯಣ ಮತ್ತು ಮಹಾಭಾರತಗಳು ಭಾರತೀಯ ಪೂರ್ವ ಪರಂಪರೆಯ ಶ್ರೇಷ್ಠ ಕಾವ್ಯಗಳಾಗಿದ್ದು, ಇದರಲ್ಲಿ ಭಾರತೀಯ ಸಮಾಜ ಮತ್ತು ಸಂಸ್ಕೃತಿಯ ಆಯಾಮಗಳು ಮೇಳೈಸಿಕೊಂಡಿವೆ. ಭಾರತೀಯ ಸಮಾಜವು ಪಿತೃ ಪ್ರಧಾನವಾಗಿದ್ದು, ಇದರ ನಿದರ್ಶನಗಳನ್ನು ರಾಮಾಯಣ ಮತ್ತು ಮಹಾಭಾರತಗಳಲ್ಲಿಯೂ ನೋಡುತ್ತೇವೆ. ರಾಮಾಯಣದಲ್ಲಿ ಸೀತೆ, ಅಹಲ್ಯೆ, ಮಂಡೋದರಿ, ತಾರಾ, ಶೃತಕೀರ್ತಿ, ಊರ್ಮಿಳೆ, ಮೊದಲಾದ ಸ್ತ್ರೀ ಪಾತ್ರಗಳನ್ನು ಕಾಣಸಿಕ್ಕರೆ ಮಹಾಭಾರತದಲ್ಲಿ ದ್ರೌಪದಿ, ಕುಂತಿ, ಗಾಂಧಾರಿ ಮುಂತಾದ ಸ್ತ್ರೀ ಪಾತ್ರಗಳಿವೆ.

“ವೇದಯುಗದ ಸ್ತ್ರೀ ಶಕ್ತಿ ಮತ್ತು ಔದಾರ್ಯದ ಪ್ರತೀಕವಾಗಿದ್ದಾಳೆ. ಅವಳು ಮಗಳಾಗಿ ಅವಳು ತಂದೆಯ ಆಸ್ತಿಯಲ್ಲಿ ಹಕ್ಕನ್ನು ಪಡೆದು, ನವ ವಿವಾಹಿತಳಾಗಿ ತನ್ನ ಗಂಡನನ್ನು ತಾನೇ ಆಯ್ಕೆಮಾಡಿಕೊಳ್ಳಬಲ್ಲವಳಾಗಿದ್ದಳು. ಆದರೆ ಈ ಸ್ವಾತಂತ್ರ್ಯ ಆಕೆಗೆ ಶಾಪವಾಗಿ ಪರಿಗಣಿಸಿದ್ದುಂಟು. ‘ಘೋಷಾ’ ಎಂಬ ಸ್ತ್ರೀ ಈ ಶಾಪಕ್ಕೊಂದು ಒಳ್ಳೆಯ ಉದಾಹರಣೆಯಾಗಿದ್ದಾಳೆ. ಅಂದು ಇವಳು ಪುರುಷನ ಸಮಾನಳಾಗಿ ಅಧಿಕಾರಕ್ಕೆ ತುಂಬಾ ಹತ್ತಿರ ಇದ್ದಳು. ಮನೆ ಒಡತಿ, ದಾಸ, ದಾಸಿಯರು, ಹಣಕಾಸು, ಪಶು ಸಂಪತ್ತು, ಯಜ್ಞ ಯಾಗಾದಿಯಂತಹ ಪ್ರತಿ ಹಂತದಲ್ಲೂ ಹಕ್ಕನ್ನು ಅನುಭವಿಸಿದ್ದಳು. ಮುಖ್ಯವಾಗಿ ವೇದಾಧ್ಯಯನದಲ್ಲಿ ಉನ್ನತ ಸ್ಥಾನ ಪಡೆದವಳು. ಅಂದು ಸ್ತ್ರೀಯರು ವೇದವಾದಿನಿಯರೂ, ಕವಯಿತ್ರಿಯರೂ ಆಗಿದ್ದರು. ಋಗ್ವೇದ ಮಂತ್ರಗಳಿಗೆ ಕರ್ತೃಗಳೂ ಆಗಿದ್ದರು. ಇವರಲ್ಲಿ ಘೋಷಾ, ವಿಶ್ವವಾರಾ, ಲೋಪಾಮುದ್ರ, ಶಚೀ, ಪೌಲೋಮಿ ವಾಗಂಭೃಣಿ ಮುಂತಾದವರು ಪ್ರಮುಖರು”.೧

(೧. ಕವಿತ.ಆರ್.ಜಿ, ತಿರುಮಲಾಂಬ ಅವರ ಸಾಹಿತ್ಯದ ತಾತ್ವಿಕ ನಿಲುವುಗಳು,೨೦೧೮, ಪುಟ ೨೭).

ಸ್ತ್ರೀ ವಾದಿ ಚಿಂತಕಿಯರಾದ ವರ್ಜಿನಿಯಾ ವುಲ್ಫ್ ಹಾಗೂ ಸಿಮೋನ್ ದ ಬೋವ ಸಾಹಿತ್ಯದಲ್ಲಿ ಮಹಿಳಾ ಪ್ರಯತ್ನಗಳ ಕಳಪೆ ಹಾಗೂ ವಿರಳತೆಯ ಪ್ರಶ್ನೆ ಹಾಕಿಕೊಂಡು ಉತ್ತರಿಸುತ್ತಾರೆ. “A Room of one’s own” ಕೃತಿಯಲ್ಲಿ ವರ್ಜೀನಿಯಾ ವುಲ್ಫ್ ಆ ಪ್ರಶ್ನೆಗೆ ಸರಳವಾಗಿ ಉತ್ತರಿಸುತ್ತಾ, ಯಾವುದೇ ಅಡ್ಡಿ ಆತಂಕಗಳಿರದ ನೆಮ್ಮದಿಯ ಪ್ರತ್ಯೇಕ

ಕೊಠಡಿಯು ಮಹಿಳೆಗೆ ಬೇಕು, ಅಲ್ಲಿ ಆಕೆ ಯೋಚಿಸುವ, ಬರೆಯುವ, ಬರೆದದ್ದನ್ನು ಮತ್ತೆ ಓದುವ, ವಿಮರ್ಶಿಸುವ ಕಾರ್ಯವನ್ನು ನಿರಾತಂಕವಾಗಿ ಕೈಗೊಳ್ಳಬಲ್ಲಳು. ಅಂದರೆ ಮಹಿಳೆ ಹೊಂದಬಹುದಾದ ಸ್ವಂತ ಕೊಠಡಿ ಎಂದರೆ ಏಕಕಾಲಕ್ಕೆ ವಾಸ್ತವವೂ, ವಾಸ್ತವದ ಅಭಾವವನ್ನು ಸೂಚಿಸುವ ಸಂಕೇತವೂ ಆಗಿದೆ.

ಮಹಿಳಾ ಕಾದಂಬರಿಗಳನ್ನು ಜನಪ್ರಿಯ ಸಾಹಿತ್ಯವೆಂಬ ನೆಲೆಯಲ್ಲಿಟ್ಟು ನೋಡಿ ಅವುಳಲ್ಲಿನ ವ್ಯವಸ್ಥೆಯ ಚರ್ಚೆಗಳು ಹಾಗೇಯೀ ಉಳಿದುಬಿಡುತ್ತವೆ. ಅಂದರೆ "ಉಸಿರುಗಟ್ಟಿಸುವ ತನ್ನ ಬದುಕಿಗೆ ಹೊರದಾರಿಯಾಗಿ ಮಹಿಳಾಲೋಕ ಸಾಹಿತ್ಯದಲ್ಲಿ ಒಂದಿಷ್ಟು ಭ್ರಮಾಲೋಕಗಳನ್ನು ನಿರ್ಮಿಸಿಕೊಳ್ಳುತ್ತದೆ. ಅದನ್ನು ಸಾಹಿತ್ಯ ವಿಮರ್ಶೆಯು ಜನಪ್ರಿಯ ಸಾಹಿತ್ಯವೆಂದು ಗುರುತಿಸುತ್ತದೆ. ಈ ನೀತಿಯಲ್ಲಿ ಮಹಿಳೆಯ ಬಹುಪಾಲು ಸಾಹಿತ್ಯವನ್ನು ದ್ವಿತೀಯ ದರ್ಜೆಯ ಸಾಹಿತ್ಯವೆಂದು ಗುರುತಿಸಿ ಗಂಭೀರ ಸಾಹಿತ್ಯಕ್ಕೆ ನೀಡುವ ಮಾನ್ಯತೆಯನ್ನು ಅದಕ್ಕೆ ನೀಡದೆ ಅಪಮೌಲೀಕರಣ ಗೊಳಿಸುತ್ತದೆ"೧. ಹೀಗಾಗಿ ಮಹಿಳಾ ಕಾದಂಬರಿಗಳ ಬಗ್ಗೆ ಗಂಭೀರ ಅಧ್ಯಯನ ಅವಶ್ಯವಿದೆ. ಈಗಾಗಲೇ ಈ ಕುರಿತಂತೆ ಸಂಶೋಧನೆಗಳು ನಡೆಯುತ್ತಿರುವುದು ಉತ್ತಮ ವಿಚಾರವಾಗಿದೆ. ಈ ಮಾದರಿಯ ಅಧ್ಯಯನಗಳನ್ನು ಪ್ರಯೋಗಿಕ ವಿಮರ್ಶೆಗೆ ಒಳಪಡಿಸಬೇಕೆಂದು ಶಶಿಕಲಾ ಅವರು ಹೇಳುತ್ತಾರೆ.

ಕನ್ನಡ ಕಾದಂಬರಿ ಕ್ಷೇತ್ರವನ್ನು ಗಮನಿಸಿದಾಗ ಸುಮಾರು ನಾಲ್ಕು ನೂರಕ್ಕೂ ಹೆಚ್ಚು ಕಾದಂಬರಿಕಾರ್ತಿಯರ ಪಟ್ಟಿಯನ್ನೇ ಕೊಡಬಹುದಾದಷ್ಟು ಸಮೃದ್ಧ ಲೇಖಕಿಯರ ಪಟ್ಟಿ ಬೆಳೆಯುತ್ತದೆ. ಆಧುನಿಕವಾಗಿ ತಿರುಮಲಾಂಬಾ ಅವರ ಕಾಲದಿಂದ ಹಿಡಿದು ಇಂದಿನವರೆಗೆ ಮಹಿಳಾ ಕಾದಂಬರಿ ಸಾಹಿತ್ಯ ವಿಭಿನ್ನ ನೆಲೆಗಳಲ್ಲಿ ತನ್ನನ್ನು ತಾನೂ ವಿವರಿಸಿಕೊಂಡಿದೆ. ತನ್ನದೇ ಆದ ಗರುತ್ತನ್ನು ಮೂಡಿಸಿದೆ. ತಿರುಮಲಾಂಬಾ, ಆರ್. ಕಲ್ಯಾಣಮ್ಮ, ಎಂ. ಕೆ. ಇಂದಿರಾ, ಎಚ್. ವಿ ಸಾವಿತ್ರಮ್ಮ, ವಾಣಿ, ತ್ರಿವೇಣಿ, ಪ್ರೇಮಾಭಟ್, ಜಯಲಕ್ಷ್ಮೀ, ಗೀತಾ ಕುಲಕರ್ಣಿ ಇವರುಗಳು. ಪದ್ಮಶೆಣೈ, ಆರ್ಯಾಂಬ ಪಟ್ಟಾಭಿ, ಚಿ.ನಾ.ಮಂಗಳ, ಅನುಸೂಯ ರಾಮರೆಡ್ಡಿ, ಇಂದಿರಾ. ಎಚ್, ಆರ್. ಎ. ಪಂಕಜ, ನಳಿನಿಮೂರ್ತಿ, ಎನ್. ಪಂಕಜ, ಪುಷ್ಪ ಎನ್. ಕೆ, ಆರ್. ಪದ್ಮಜ, ಎನ್. ಆರ್ ಮಾಲತಿ, ವೀಣಾ ಶಾಂತೇಶ್ವರ, ಗೀತಾ ನಾಗಭೂಷಣ್, ಗುಡಿಬಂಡೆ ಪೂರ್ಣಿಮಾ, ದೇವಕೀಮೂರ್ತಿ, ಶಾರದಾ ರಾಜಶೇಖರ್, ಮಾಲತಿ ರಾಮದಾಸ್, ಮುಕ್ತ ಸಿ.ಎಸ್, ಗಿರಿಜಾ, ಉಷಾದೇವಿ, ವಸಂತಾದೇವಿ, ಸುಧಾ ಹರೀಶ್, ಸಾಯಿಸುತೆ, ಅಶ್ವಿನಿ, ಉಷಾನವರತ್ನರಾಮ್, ಚಿತ್ರಲೇಖಾ, ಎಚ್. ಜಿ. ರಾಧಾದೇವಿ, ವಿಶಾಲಾಕ್ಷಿ ದಕ್ಷಿಣಾಮೂರ್ತಿ, ಈಚನೂರು ಶಾಂತ, ಸಾರಾ ಅಬೂಬಕ್ಕರ್, ವೈದೇಹಿ, ಬಿ.ಟಿ. ಲಲಿತಾನಾಯಕ್, ಪಿ. ರತ್ನ ಜಿ ಭಟ್, ಎಸ್. ರಮಾ, ಇಂದ್ರಾಣಿ, ಇಂದಿರಾ ಹೆಗ್ಗಡೆ, ಸುಧಾಮೂರ್ತಿ, ನಾಗವೇಣಿ ಎಚ್, ವೇದಾ ಎಂ. ಎಸ್, ಪ್ರಭಾವತಿ ಎಸ್. ವಿ, ಲೀಲಾ ಮಣ್ಣಾಲ, ಶುಭಮಂಗಳ, ಲೀಲಾ ರಾಮಣ್ಣ, ಕಮಲ ಹೆಮ್ಮಿಗೆ, ಕಮಲಾ ಹಂಪನ ಹೀಗೆ ಇವರುಗಳು ನೂತನ ಅಭಿವ್ಯಕ್ತಿ ನೆಲೆಗಳನ್ನು ಮಾದರಿಗಳು ಕಾಲದಿಂದ ಕಾಲಕ್ಕೆ ಬೆಳೆದು ಬರುತ್ತಿರುವುದುನ್ನು ಗಮನಿಸಬಹುದು.

(೧. ಶ್ರೀಮತಿ ಹೆಚ್ ಎಸ್, ಹೆಣ್ಣು ಬರೆಹದ ಒಳಬಂಡಾಯ, ಪು.ಸಂ-೪ಲ)

ತಿರುಮಲಾಂಬಾ ಅವರು ಕಾದಂಬರಿಯ ಕ್ಷೇತ್ರದ ಮೊದಲ ಲೇಖಕಿ. ತಿರುಮಲಾಂಬಾ ಕಾದಂಬರಿ ಬರೆಯಲು ಪ್ರಾರಂಭಿಸಿರುವ ಹೊತ್ತಿಗಾಗಲೇ ಕನ್ನಡದಲ್ಲಿ ಕಾದಂಬರಿಯ ರೂಪ ಅಡಿಯಿಟ್ಟಿತ್ತು. ತಿರುಮಲಾಂಬಾ ಬರೆಯಲು ತೊಡಗಿದ ಸನ್ನಿವೇಶವೆಂದರೆ ಅದು ವಸಾಹತುಶಾಹಿ, ರಾಷ್ಟ್ರೀಯ ಚಳುವಳಿಯ ಸಂದರ್ಭ ಮತ್ತು ಆಧುನಿಕ ವಿಚಾರಧಾರೆಯು ಕನ್ನಡದಲ್ಲಿ ರೂಪುಗೊಂಡಿದ್ದ ಮನಸ್ಥಿತಿ ಸಾಂಸ್ಕೃತಿಕ ಸನ್ನಿವೇಶ. ಈ ದೃಷ್ಟಿಯಿಂದ ತಿರುಮಲಾಂಬ ಅವರು ಬರೆಯಲು ತೊಡಗಿದ ಸನ್ನಿವೇಶವು ಒಂದು ದೃಷ್ಟಿಯಿಂದ ಸಂಕಷ್ಟಕರವಾದ್ದು. ಆ ಕಾಲದಲ್ಲಿ ಯಾವ

ಮಹಿಳೆಯರು ಬರೆಯುತ್ತಿರಲಿಲ್ಲ ಮತ್ತು ಕಾದಂಬರಿಯನ್ನು ಬರೆಯುವುದು ಮತ್ತು ಓದುವುದು ಎರಡೂ ಸಹ ಪ್ರೀಯವಾದ ಹವ್ಯಾಸ ಅಥವಾ ಅಭ್ಯಾಸಗಳು ಆಗಿರಲಿಲ್ಲ. ಈ ವಿಧದ ಸಾಂಸ್ಕೃತಿಕ ಪರಿಸರವಿದ್ದ ಸನ್ನಿವೇಶದಲ್ಲಿ ತಿರುಮಲಾಂಬ ಬರೆಯುವ ಆಶಯಕ್ಕೆ ಬಿದ್ದವರು. ಅಷ್ಟೇ ಅಲ್ಲದೇ ಭಾರತೀಯ ಸಂದರ್ಭದಲ್ಲಿ ಪುರಾಣ ಕೃತಿಗಳಷ್ಟು ಪ್ರಭಾವಶಾಲಿಯಾಗಿ ಕಾದಂಬರಿಯಾಗಿರಲಿಲ್ಲ. ವಸಹಾತುಕಾಲದಲ್ಲಿ ಪ್ರಾರಂಭವಾದ ಶಿಕ್ಷಣ ಪದ್ಧತಿಯು ಸರ್ವರಿಗೂ ಉದಾರವಾದ ಅವಕಾಶವನ್ನು ತನ್ನ ಸ್ವರೂಪವಾಗಿಸಿಕೊಂಡಿತ್ತು.

ವಸಾಹತುಶಾಹಿ ಶಿಕ್ಷಣ ನೀತಿಯಲ್ಲಿದ್ದ ಸರಿ ತಪ್ಪುಗಳ ಅಂಶ ಬೇರೆ, ಆದರೆ ಎದುರಿನಲ್ಲಿ ಸ್ತ್ರೀ-ಪುರುಷ, ಉಚ್ಚ-ನೀಚವೆಂಬ ಭೇದವಿರಲಿಲ್ಲ. ಅಷ್ಟರ ಮಟ್ಟಿಗೆ ವಸಾಹತುಕಾಲದ ಶಿಕ್ಷಣ ನೀತಿಯಲ್ಲಿ ಉದಾರತೆ ಒಂದು ಕ್ರಮವಾಗಿ ಉಳಿದಿತ್ತು. ಮತ್ತೊಂದು ಬ್ರಿಟೀಷ್ ಮಾದರಿಯ ಶಿಕ್ಷಣ ಕ್ರಮದ ಗೊತ್ತು ಗುರಿಗಳು ಭಾರತೀಯ ಶಿಕ್ಷಣ ಕ್ರಮದ ಗೊತ್ತು ಗುರಿಗಳಿಗೆ ಹೋಲಿಸಿದರೆ ತೀರ ಭಿನ್ನವಾದ ಆಯಾಮವನ್ನುಹೊಂದಿದ್ದವು. ಸಾಂಪ್ರದಾಯಿಕ ಶಿಕ್ಷಣ ಕ್ರಮಕ್ಕೆ ಇದ್ದ ಉದ್ದೇಶ ಮತ್ತು ನೀತಿ ನಿರೂಪಣೆಯು ಬೇರೆಯಾಗಿದ್ದವು.ಆದರೆ ಅವರ ಧೋರಣೆಯು ಸ್ತ್ರೀಯರ ಪರವಾಗಿಯೂ ಇದ್ದವು. ಪಿತೃ ಸಂಸ್ಕೃತಿ ಬಿತ್ತಿದ ಅನೇಕ ಅಂಶಗಳು ವಿಮರ್ಶೆಯಲ್ಲಿ ಹಾಸುಹೊಕ್ಕಾಗಿ ಬಂದಿದ್ದು ಪುರುಷನಿಷ್ಠ ವಿಮರ್ಶಕರು ಅದನ್ನೇ ಸಹಜವಾಗಿ ತೆಗೆದುಕೊಂಡಿದ್ದಾರೆ. ಈ ಪರಂಪರೆಯ ಬಗೆಗಿನ ಸಹಜ ನಿಲುವು ಪುರುಷನಿಷ್ಠ ವಿಮರ್ಶಕರ ಸಾಹಿತ್ಯ ಸಿದ್ಧಾಂತದ ನೆಲೆಯಾಗಿದ್ದರೆ ಸ್ತ್ರೀವಾದಿ ವಿಮರ್ಶೆಯು ಈ ಪಿತೃ ಸಂಸ್ಕೃತಿಯನ್ನು ಹೊರಗಿಟ್ಟು ಮಾತಾಡತೊಡಗಿದೆ. ಸ್ತ್ರೀವಾದವು ನಿರಾಕರಿಸುವುದು ಪಿತೃರೂಪಿ ಸಂಸ್ಕೃತಿಯನ್ನೇ ಆಗಿದ್ದರೂ ಹೊಸ ಆಲೋಚನಾ ಕ್ರಮಕ್ಕಾಗಿ, ಪಿತೃ ಸಂಸ್ಕೃತಿಯನ್ನು ಕೆಲವು ಬಾರಿ ಆಧರಿಸುತ್ತಾರೆ. ಸ್ತ್ರೀವಾದಿ ಸಾಹಿತ್ಯ ಸಿದ್ಧಾಂತವು ರೂಪಿತವಾಗುವುದು ಹೀಗೆ ವಿಷಯ ವಿಷಯದ ಅಂಶ, ಅವುಗಳಿಗೆ ಕಾರಣವಾದ ನೆಲೆ, ಅವುಗಳಿಂದುಂಟಾಗುವ ರೀತಿ ಮತ್ತು ಅದರ ಆಧರಣೆಗಳನ್ನು ಕುರಿತ ಶಾಸ್ತ್ರ ಭಾಗ.

ಆರ್. ಕಲ್ಯಾಣಮ್ಮ ೧೦ನೇ ವಯಸ್ಸಿಗೆ ಮದುವೆಯಾಗಿ ಮೂರೇ ತಿಂಗಳಿಗೆ ಪತಿಯನ್ನು ಕಳೆದುಕೊಂಡು ವಿಧವೆಯಾದವರು. ಬೆಂಗಳೂರಿನಲ್ಲಿ ಜನಿಸಿದ ಕಲ್ಯಾಣಮ್ಮ ಆರಂಭಿಕ ಶಿಕ್ಷಣವನ್ನು ಆರ್ಯಬಾಲಿಕಾ ಶಾಲೆಯಿಂದ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದವರು. ೨೧ನೇ ವಯಸ್ಸಿನಲ್ಲಿ ಶ್ರೀ ಶಾರದ ಸ್ತ್ರೀ ಸಮಾಜವನ್ನು ಪ್ರಾರಂಭಿಸಿದ್ದಲ್ಲದೆ, ಅನಂತರದಲ್ಲಿ ಸರಸ್ವತಿ ಎಂಬ ಪತ್ರಿಕೆ ಆರಂಭಿಸಿದರು. ಕಾದಂಬರಿ, ನಾಟಕ, ಸಣ್ಣಕಥೆ, ಪತ್ರಿಕೋದ್ಯಮ ಮುಂತಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಿಗಿಸಿಕೊಂಡು ಸುಖಲಕ, ಭಕ್ತ ವೀರಾ, ಮಾಧವಿ ನಿರ್ಮಲಾ, ಇಂದಿರಾ, ವಸುಂಧರಾ ಮುಂತಾದ ಕೃತಿಗಳನ್ನು ರಚಿಸಿದರು. ಇಂದಿರಾ ಕಾದಂಬರಿ ವಿಧವಾ ಸಮಸ್ಯೆಯನ್ನು ವಿಶ್ಲೇಷಿಸುತ್ತದೆ. ಕಾದಂಬರಿಯಲ್ಲಿ ಇಂದಿರೆ ಮದುವೆಯಾದಾಗ ಅವಳ ವಯಸ್ಸು ಹದಿನಾಲ್ಕು.

ತನ್ನ ಪತಿಯನ್ನು ಕಳೆದುಕೊಂಡಾಗ ಹೇಗೆ ಪ್ರತಿಕ್ರಿಯಿಸಬೇಕು ಎಂದು ಬಾಲಕಿಯಾದ ಇಂದಿರೆಗೆ ಅರಿವೂ ಇಲ್ಲ. ಇಂದಿರೆ ಅವಳ ತಾಯಿಯೊಂದಿಗೆ ಆಡುವ ಮಾತುಗಳಲ್ಲಿ ಮನಕಲಕುವ ಸನ್ನಿವೇಶವನ್ನು ನಾವು ಗಮನಿಸಬಹುದು. ಇನ್ನು ಆಭರಣಗಳನ್ನು ಧರಿಸಿಕೊಳ್ಳಕೂಡದಂತೆ! ಹಾಗದರೆ ನಾನು ನಮ್ಮ ಅಜ್ಜಿಯಂತಿರಬೇಕೆ? ಎಂದು ಕೇಳುವ ಸನ್ನಿವೇಶ ಮನಕಲಕುವಂತಿದೆ. ಕಲ್ಯಾಣಮ್ಮ ಅವರ ಮಾಧವಿ ಕಾದಂಬರಿ ಚಾರಿತ್ರಿಕ ವಸ್ತುವನ್ನು ಒಳಗೊಂಡು ರಚನೆಯಾಗಿದೆ. ಈ ಕಾದಂಬರಿಯೋದಿದಾಗ ಕಲ್ಯಾಣಮ್ಮ ಅವರು ಪ್ರಗತಿಶೀಲ ಪಂಥದವರಿಂದ ಪ್ರಭಾವಿತರಾಗಿರಬೆಕೆಂದು ಎನಿಸುತ್ತದೆ. ಈ ಕಾದಂಬರಿಯಲ್ಲಿ ವೇಶ್ಯಾಸಮಸ್ಯೆಯ ಬಗೆಗೆ ಆಳವಾದ ಚರ್ಚೆಯನ್ನು ನಡೆಸಿದಾರೆ. ತಿರುಮಲಾಂಬಾ ಹಾಗೂ ಕಲ್ಯಾಣಮ್ಮನವರ ಕಾದಂಬರಿಗಳು ಸಮಾನಾಂತರವಾಗಿ ಸಾಗುವುದನ್ನು

ಕಾಣಬಹುದು.ವೈಧವ್ಯದ ಸಮಸ್ಯೆ, ಸ್ತ್ರೀ ಕುರಿತ ಸಮಾಜದ ಆಲೋಚನೆಗಳೆಲ್ಲವೂ ಬದಲಾಗಬೇಕೆಂದು ಅವರು ಬಯಸಿದರು, ಆದರೂ ಇವರ ಅಭಿವ್ಯಕ್ತಿ ಹಿನ್ನಲೆಯೂ ಆರ್ಯಸಂಸ್ಕೃತಿ ಮೂಲದ ಮೇಲ್ವರ್ಗದ ಬೇರಿನಿಂದ ಕೂಡಿದೆ ಎಂಬುದು ಮುಖ್ಯ.

ಫಣಿಯಮ್ಮ ಕಾದಂಬರಿ ನೂರೈವತ್ತು ವರುಷದ ಹಿಂದಿನ ಸಾಮಾಜಿಕ ಜೀವನವನ್ನು ವಿವರಿಸುತ್ತದೆ. ತನ್ನ ಗಂಡನ ಮರಣಾ ನಂತರ ತನ್ನ ಜೀವಿತದ ಕೊನೆಯುಸಿರು ಇರುವವರೆಗೂ ಪರರಿಗಾಗಿಯೇ ದುಡಿಯುವ ಫಣಿಯಮ್ಮ ಇಲ್ಲಿನ ಕೇಂದ್ರ ಪಾತ್ರ. ಇಲ್ಲಿ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀ ಸಮುದಾಯದ ಸೋಷಣೆ ಹಾಗೂ ಬಂಡಾಯದ ಬಗೆಗೆ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ. "ಕಾದಂಬರಿಯ ಆರಂಭದಿAದಲೇ ಲೇಖಕಿ ಸ್ತ್ರೀ ಶೋಷಣೆಯಲ್ಲಿ ಪುರುಷವರ್ಗ ಅದರಲ್ಲೂ ಬ್ರಾಹ್ಮಣ ಸಮಾಜದ ಮಠ-ಮಾನ್ಯಗಳ ಕೈವಾಡ ಹಾಗೂ ತೆಗೆದುಕೊಳ್ಳುವ ಅಮಾನುಷ ತೀರ್ಮಾನಗಳನ್ನು ವ್ಯಂಗ್ಯವಾಗಿ ನಿರ್ದಾಕ್ಷಿಣ್ಯವಾಗಿ ಟೀಕಿಸುತ್ತಾ, ಗೇಲಿ ಮಾಡುತ್ತಾರೆ".೩

ಈ ಕಾದಂಬರಿ ಜಿಡ್ಡುಗಟ್ಟಿದ ಸಂಪ್ರದಾಯಶೀಲ ವ್ಯವಸ್ಥೆಯಲ್ಲಿ ತಮ್ಮ ಸ್ಥಾನಮಾನದ ಪ್ರಜ್ಞೆಯೇ ಇಲ್ಲದ ವ್ಯವಸ್ಥೆಗೆ ಬದ್ಧರಾದ ಮಹಿಳೆಯರು ಸಮಾಜದ ವ್ಯವಸ್ಥೆಯನ್ನು ಒಪ್ಪಿಕೊಂಡ ಪಾತ್ರಗಳಾಗದೆ ಹೊಸಗಾಳಿಗೆ ಮೈಯೊಡ್ಡಿಕೊಂಡ ಪಾತ್ರಗಳನ್ನು ಲೇಖಕಿ ಇಲ್ಲಿ ಚಿತ್ರಿಸಿದ್ದಾರೆ. ಇಂದಿರಾ ಅವರ ಗೆಜ್ಜೆಪೂಜೆ ಕಾದಂಬರಿಯ ವಸ್ತು ವೇಶ್ಯಾ ಸಮಸ್ಯೆ. ಇಲ್ಲಿನ ಚಂದ್ರಿ ವಿದ್ಯಾವಂತೆ, ತನ್ನ ಕೈ ಹಿಡಿಗುವ ಧೈರ್ಯ ಗಂಡಿಗಿಲ್ಲ ಎಂದರಿತಾಗ ತನ್ನ ಶಿಕ್ಷಣದ ಸದುಪಯೋಗ ಸಾಧ್ಯವಿತ್ತು. ಅವಳ ಪ್ರಭಾವಿ ವ್ಯಕ್ತಿತ್ವ ಸುತ್ತಲ ನಂಬಿಕೆ ಗಳಿಸಲು ಸಮರ್ಥವಿತ್ತು. ಸಂಗವ್ವನನ್ನು ಎದುರಿಸುವ ಧೈರ್ಯವಿದೆ. ತಾಯಿಯ ಮನದ ಪರಿಚಯವಿದೆ. ಎಂದೆಂದೂ ಸೋಮುವಿನವಳಾಗಿ ತನ್ನ ಭಾವನೆಗೂ ಬೆಲೆ ಕೊಡಬಹುದಾಗಿತ್ತು. ಈ ಎಲ್ಲ ಸಾಧ್ಯತೆಗಳನ್ನು ತಿರಸ್ಕರಿಸಿ, ಮದುವೆಯೇ ಜೀವನದ ಮುಖ್ಯ ಧ್ಯೇಯವೆನ್ನುವಂತೆ ಮಾಡಿದ್ದಾರೆ. ಎಂದು ಕೆ ವಿಜಯಶ್ರೀ ಅವರು ಹೇಳಿದ್ದಾರೆ.

೧೯೪೦ರ ಅವಧಿಯಲ್ಲಿ ಬರೆದ ಗೀತಾ ಕುಲಕರ್ಣಿ ಅವರು ಸಾಹಿತ್ಯ ಕ್ಷೇತ್ರಕ್ಕೆ ಬಂದದ್ದು ಕತೆಗಾರ್ತಿಯಾಗಿ ಇವರ ಮೊದಲ ಕಾದಂಬರಿ 'ಕಂಬನಿ' ಪ್ರಕಟವಾಗಿದ್ದು ೧೯೬೭ರಲ್ಲಿ. ಇವರ ಇತರ ಕಾದಂಬರಿಗಳು ಗರ್ಭ, ಸಪ್ನ ಮಂದಿರ, ದೀಪಮಿಂಚಿತು, ಶೋಭನಾ, ನೂಲೇಣಿ, ಸಂಬಂಧ. ಕೆಳವರ್ಗದ ಮಹಿಳೆಯರ ನೋವು ಹತಾಶೆಗಳು ಇವರ ಕಾದಂಬರಿಯ ಪ್ರಮುಖ ವಸ್ತುಗಳಾಗಿವೆ.

(೩. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ, (ಸಂ) ಡಾ ನಾರಾಯಣ ಬಿ. ಪವಾರ, ೨೦೧೩, ಪು.೫೩)

ಸಪ್ನ ಮಂದಿರ ಕಾದಂಬರಿ ವಿಧವಾ ಸಮಸ್ಯೆ, ಮರುವಿವಾಹದ ಪ್ರಗತಿಪರವಾದ ವಿಚಾರಗಳನ್ನು ಒಳಗೊಂಡಿರುವ ಕಾದಂಬರಿಯಾಗಿದೆ. ದೀಪಮಿಂಚಿತು ಕಾದಂಬರಿ ಕಾಮುಕ ಗಂಡನ ಶೋಷಣೆ ಮತ್ತು ಕ್ರೂರ ಅತ್ತೆಯ ಕಾರಣದಿಂದ ತನ್ನ ಜೀವವನ್ನು ಕಳೆದುಕೊಂಡ ಹೆಣ್ಣಿನ ಕುರಿತು ತಿಳಿಸುತ್ತದೆ. ಮಲತಾಯಿಯ ಶೋಷಣೆಯಿಂದ ನರಳಿದ ಮಕ್ಕಳ ಕತೆಯನ್ನು ಶೋಭನಾ ಕಾದಂಬರಿ ತೀಳಿಸುತ್ತದೆ. ಮಾನವ ಸಂಬಂಧದ ವಿವರಗಳನ್ನ ಇವರ ನುಲೇಣಿ ಕಾದಂಬರಿಯು ತಿಳಿಸುತ್ತದೆ. ಇವರ ಸಂಬಂಧ ಕಾದಂಬರಿ ಸಿದ್ದು ಶಾರದಾ, ದುರ್ಗಿಯರ ತ್ರಿಕೋನ ಸಂಸಾರವನ್ನು ವಿವರಿಸುತ್ತದೆ. ಇಲ್ಲಿ ಶಾರದಾ ಅನಾಥೆ ಜಮೀನುದಾರರ ಮನೆಯಲ್ಲಿ ಕೆಲಸ ಮಾಡುವ ಶಾಂತಮ್ಮನ ಆಶ್ರಯವನ್ನು ಅನಿವಾರ್ಯವಾಗಿ ಪಡೆಯುತ್ತಾಳೆ. ವಿಷಯಲೋಲುಪನಾದ ಜಮೀನುದ್ದಾರ ಮತ್ತು ಅವನಿಗೆ ಸಹಾಯಕಳಾಗಿದ್ದ

ಶಾಂತಮ್ಮ ಇವರ ಸ್ತ್ರೀ ಶೋಷಣೆಯನ್ನು ಕಾದಂಬರಿಯು ತಿಳಿಸುತ್ತದೆ. ಇಂತಹ ಜೀವನವನ್ನು ನಿರಾಕರಿಸುವ ಶಾರದಾ ಮತ್ತು ಅವಳೊಂದಿಗೆ ಸಿದ್ಧುವಿನ ಜೀವನ ವಿಶ್ಲೇಷಿಸಲ್ಪಟಿದೆ.

ಗೀತಾ ಕುಲಕರ್ಣಿಯವರ ಕಾದಂಬರಿಗಳ ವಸ್ತು ಸ್ತ್ರೀ ಪರವಾದ ಕಾಳಜಿ ಉಲ್ಲವು. "ಬದುಕನ್ನು ನಯವಾಗಿಸಿ ಬಾಳು ಬಾಳೆಯ ತೋಟದಂತೆ ಮನೋಹರವಾಗಿ ಕಂಗೋಳಿಸುವಂತೆ ಸಾತ್ವಿಕ ಸರಸತೆಯ ಪಾತ್ರಗಳನ್ನು ನಿರ್ಮಿಸಬಲ್ಲ ಗೀತಾ ಬಾಳಿನಲ್ಲಿ ಬದುಕು ಮಾಡುವ ಹದ ಬಲ್ಲವರಾಗಿದ್ದಾರೆ."೪ ಎಂಬುದು ಹಿರಿಯ ಸಾಹಿತಿ ದಿ ಎನ್ಕೆ. ಕುಲಕರ್ಣಿಯವರ ಅಭಿಪ್ರಾಯವಾಗಿದೆ.

ಸಾರಾ ಅಬೂಬಕರ ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ನಿಜವಾದ ಸ್ತ್ರೀ ಸಂವೇದನೆಯ ಬಂಡಾಯ ದನಿಯಾಗಿ ಕಾಣಿಸಿಕೊಂಡವರು ಸಾರಾ ಅಬೂಬಕರ್. ಇವರು ನಿರ್ದಿಷ್ಟ ಮುಸ್ಲಿಂ ಕಟ್ಟಾಸಂಪ್ರದಾಯವಾದಿಗಳ ವಿರೋಧದ ನಡುವೆಯೂ ತಮ್ಮ ಸಮುದಾಯದ ಮಹಿಳೆಯರ ಜೀವನದ ಸಾವು ನೋವಿನ ನಿಗೂಢ ಕಥೆಗಳನ್ನು ಕನ್ನಡ ಸಾಹಿತ್ಯಕ್ಕೆ ತೆರೆದಿಟ್ಟ ದಿಟ್ಟ ಲೇಖಕಿ. ಚಂದ್ರಗಿರಿಯ ತೀರದಲ್ಲಿ ಎಂಬ ಕಾದಂಬರಿಯ ಮೂಲಕ ಸಾಹಿತ್ಯರಂಗ ಪ್ರವೇಶಿಸಿದ ಅಬೂಬಕರ್ಅವರು ಸಹನಾ, ಚಪ್ಪಲಿಗಳು, ವಜ್ರಗಳು, ತಳವೊಡೆದ ದೋಣಿಯಲ್ಲಿ ಸುಳಿ- ಮುಂತಾದ ಪ್ರಮುಖ ಕೃತಿಗಳಲ್ಲಿ ಮುಸ್ಲಿಂ ಸಮಾಜದ ಹೆಣ್ಣು ಮಕ್ಕಳು ಅನುಭವಿಸುವ ಸಾಮಾಜಿಕ, ಆರ್ಥಿಕ, ರಾಜಕೀಯ, ಲೈಂಗಿಕ, ಶೈಕ್ಷಣಿಕ, ಧಾರ್ಮಿಕ ಹೀಗೆ ಶೋಷಣೆಯ ಅಭಿವ್ಯಕ್ತಿಯನ್ನು ನಿರೂಪಿಸಿದ್ದಾರೆ.ಚಂದ್ರಗರಿಯ ತೀರದಲ್ಲಿ ಕಾದಂಬರಿಯಲ್ಲಿ ಮುಸ್ಲಿಂ ಮಹಿಳೆಯರು ಧರ್ಮದ ಹೆಸರಿನಲ್ಲಿ ಪಡುವ ಯಾತನೆ ಅನಾವರಣ ವನ್ನು ನಾವು ನೋಡಬಹುದಾಗಿದೆ. ಹರಿನರನೇ ವಯಸ್ಸಿಗೆ ಮದುವೆಯಾದ ನಾದಿರಾಳ ಬದುಕಿನ ದುರಂತವನ್ನು ಚಿತ್ರಿಸುತ್ತದೆ.ಆರ್ಥಿಕ ಮುಗ್ಗಟ್ಟಿಗಾಗಿ ಮಗಳ ಬಾಳನ್ನು ಬಲಿಕೊಡುವ ತಂದೆಯ ಪ್ರತಿಷ್ಠೆ ಜೊತೆಗಿನ ಶೋಷಣೆಗೆ ನದಿರಾ ಸಾಕ್ಷಿಯಾಗುತ್ತಾಳೆ. ಸಹನಾ ಕಾದಂಬರಿ ಮುಸ್ಲಿಂ ಸಮುದಾಯದಲ್ಲಿರುವ ಬಹುಪತ್ನಿತ್ವದ ಸಮಸ್ಯೆಯ ಮೆಲೆ ಬೆಳಕು ಚಲ್ಲುತ್ತದೆ.

ಬಿ. ಟಿ. ಲಲಿತಾ ನಾಯಕ್ ರಾಯಚೂರು ಜಿಲ್ಲೆಯ ಬುಡಕಟ್ಟಿನ ಹಿನ್ನೆಲೆಯಿಂದ ಬಂದ ಇವರು ಕಾದಂಬರಿ ಕಾವ್ಯ ಕಥೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ತೊಡಗಿದ್ದಾರೆ. ಕೇವಲ ಸಾಹಿತ್ಯ ಕ್ಷೇತ್ರವಲ್ಲದೆ, ರಾಜಕೀಯ, ಸಂಘಟನೆ ಹೀಗೆ ವಿಭಿನ್ನ ಆಯಾಮದಲ್ಲಿ ಹರಡಿಕೊಂಡಿದ್ದಾರೆ.

(೪.ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ, (ಸಂ) ಡಾ ನಾರಾಯಣ ಬಿ. ಪವಾರ, ೨೦೧೩, ಪು. ೭೯)

ಗತಿ, ನೆಲೆ-ಬೆಲೆ ಇವರ ಮಹತ್ವಪೂರ್ಣ ಕಾದಂಬರಿಗಳು.ನೆಲೆ ಬೆಲೆ ಕಾದಂಬರಿ ಹೆಣ್ಣು ಗಂಡಿ ಸಂಬAಧ, ಪ್ರೀತಿ, ಮದುವೆ, ಹೆಣ್ಣಿನ ಶೀಲ, ಬಂಜಡತನ, ನೀತಿ- ಅನೀತಿ ಇವು ವ್ಯಕ್ತಿ ಮತ್ತು ಸಮಾಜದ ನೆಲೆಯಲ್ಲಿ ಪಡೆದುಕೊಳ್ಳುವ ವಿವರಣೆಗಳನ್ನು ತಿಳಿಸುತ್ತದೆ. ಇಲ್ಲಿನ ಜಯ ಮದುವೆಯಾಗಿ ಮಕ್ಕಳಾಗದೇ ಇದ್ದುದಕ್ಕೆ ಬಂಜೆ ಎಂಬ ಅವಹೇಳನಕ್ಕೆ ಗುರಿಯಾಗುತ್ತಾಳೆ. ಗತಿ ಕಾದಂಬರಿಯಲ್ಲಿ ಬರುವ ಸೋನಿ, ಮತ್ತು ಲಚಿಮಿ ಪಾತ್ರಗಳು ಪುರುಷ ದೌರ್ಜನ್ಯವನ್ನು ಪ್ರತಿಭಟಿಸಿ ನಿಲ್ಲುವಂತವುಗಳು. ಸೋನಿ ಪಾತ್ರದ ಮೂಲಕ ಲಂಬಾಣಿ ಹೆಣ್ಣಿನ ಶೋಷಣೆಯನ್ನು ವಿವರಿಸಲಾಗಿದೆ. "ಹೆಣ್ಣು ಯಾವುದೇ ವರ್ಣ-ವರ್ಗಕ್ಕೆ ಸೇರಿರಲಿ, ವಿದ್ಯಾವಂತೆಯಾಗಿರಲಿ, ಅವಿದ್ಯಾವಂತೆಯಾಗಿರಲಿ ಸಮಾಜ ಅವಳನ್ನು ಎರಡನೇ ದರ್ಜೆ ಪ್ರಜೆಯನ್ನಾಗಿಯೇ ಗುರುತಿಸಿರುವುದು ನಿಜ. ಅಲ್ಲಿ ಕುಡುಕ ಗಂಡ ಮಾವ- ಭಾವ,

ಮೈದುನರಿಂದ ಹೊಡೆತ ತಿಂದು ಗೋಳಾಡದ ಹೆಂಗಸೇ ಪುಣ್ಯವಂತೆ! ಗಂಡು ಮಕ್ಕಳನ್ನು ಹಡೆದವಳು ಭಾಗ್ಯವಂತೆ, ಇಲ್ಲವಾದರೆ ಅವಳ ಬದುಕು ನರಕ"೫. ಈ ಮಾತುಗಳು ಕಾದಂಬರಿಯ ಗುರಿಯನ್ನು ನಿಖರವಾಗಿ ಹೇಳುತ್ತವೆ.

ಸ್ತ್ರೀಲೋಕ ಸವಿತಾ ನಾಗಭೂಷಣ ಅವರ ಪ್ರಮುಖ ಕಾದಂಬರಿ. ಕಾವ್ಯಗಳ ಮೂಲಕ ಸಾಹಿತ್ಯಕ್ಕೆ ಕ್ಷೇತ್ರಕ್ಕೆ ಬಂದವರು ಸವಿತಾ ನಾಗಭೂಷಣ. ಸ್ತ್ರೀ ಲೋಕ ಕಾದಂಬರಿ ಹೆಣ್ಣಿನ ಅನುಭವ ಲೋಕಗ್ರಹಿಕೆ, ಅವಳ ವಿಚಾರ ಮತ್ತು ಅಭಿವ್ಯಕ್ತಿಗಳು ಭಿನ್ನವಾಗಿ ರೂಪುಗೊಂಡಿರುತ್ತವೆ ಎಂದು ತಿಳಿಸುತ್ತದೆ. ಇಲ್ಲಿ ಯಾವುದೇ ಕೇಂದ್ರ ಪಾತ್ರಗಳಿಲ್ಲ ನಿರೂಪಕರ ಘಟನೆಗಳಿಲ್ಲ. ಒಂದು ಸಮೂಹ ದನಿಯಾಗಿ ಈ ಕಾದಂಬರಿಯು ವಿಶ್ಲೇಷಿಸಲ್ಪಟ್ಟಿದೆ. ಇಲ್ಲಿನ ಸುಮಾಳಿಗೆ ಸಣ್ಣಪುಟ್ಟದಕ್ಕೆ ಗಂಡನ ಮುಂದೆ ಕೈಕಾಚುವುದು ಮುಜುಗರವಾಗುತ್ತದೆ, ಕೆಲಸ ಮೌಲ್ಯಯುತವಾಗುತ್ತದೆ. ಕಮಲಾಳಿಗೆ ಬಿಡುವು ಅಗತ್ಯ ಎನಿಸುತ್ತದೆ.

ಬಂಡಾಯ ಹಾಗೂ ಸ್ತ್ರೀವಾದಿ ಧೋರಣೆಯ ಲೇಖಕಿಯರಲ್ಲಿ ಪ್ರಮುಖರಾದ ಎಚ್ ನಾಗವೇಣಿ, ಪ್ರಸ್ತುತ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಗ್ರಂಥಪಾಲಕರಾಗಿದ್ದಾರೆ. ೧೯೬೨ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹೊನ್ನಕಟ್ಟೆಯಲ್ಲಿ ಜನಿಸಿದ ಇವರು ೧೯೯೮ರಲ್ಲಿ ಗಾಂಧಿ ಬಂದ ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿ ಪ್ರಾದೇಶಿಕ ತತ್ವ, ಬಂಡಾಯ ಹಾಗೂ ಸ್ತ್ರೀ ವಾದಗಳೆಲ್ಲವನ್ನು ಒಳಗೊಂಡಿರುವುದು ವಿಶೇಷ. ಸ್ತ್ರೀಕುಲದ ಬಗ್ಗೆ ದಾರುವಿನ ಪಾತ್ರದಲ್ಲಿ ವಿವರಿಸಲಾಗಿದೆ. ದಾರು ಇಲ್ಲಿ ಮೈನೆರೆಯಾದೆ ಇದ್ದದೇ ಅವಳಿಗೆ ಶಾಪವಾಗುತ್ತದೆ. ಅವಳನ್ನು ಶಿಖಂಡಿಯೆಂದು ಹಂಗಿಸಲಾಗುತ್ತದೆ. ದಾರುವಿನ ಜೀವನವನ್ನು ಸುಗಮಮಾಡಲು ಅವಳನ್ನು ಕೈಹಿಡಿದ ಮಾರಪ್ಪನಿಗೆ ಅವಳನ್ನು ಸಾಮಾಜಿಕ ಸ್ಥರದಿಂದ ಮೇಲೆತ್ತುವ ಹಂಬಲವಿತ್ತೆ ವಿನಃ ಅವಳ ಹೆಣ್ತನವನ್ನು ಅನುಭವಿಸುವ ಉದ್ದೇಶ ವಿರಲಿಲ್ಲ. ಕೊನೆಗೆ ಅವಳಿಗೂ ಹೆಣ್ತನದ ಸಹಜವಾದ ದೈಹಿಕ ಬಯಕೆ ಮತ್ತು ಕಾಮನೆಗಳಿರುತ್ತವೆ ಎಂಬ ಅರಿವಿನಿಂದ ಅವರಿಬ್ಬರ ಜೀವನವು ಸುಗಮವಾಗುತ್ತದೆ.

ಕನ್ನಡ ಮಹಿಳಾ ಸಾಹಿತ್ಯದ ವಿವಿಧ ಪ್ರಕಾರದಲ್ಲಿ ಕೃಷಿ ನಡೆಸಿರುವ ಸುನಂದಾ ಬೆಳಗಾವಂಕರ ಅವರ ಮೊದಲಕೃತಿ ಕಜ್ಜಾಯ. ನಾಸು ಎಂಬ ಸಾಮಾಜಿಕ ಕಾದಂಬರಿಯ ಮೂಲಕ ಕಾದಂಬರಿ ಕ್ಷೇತ್ರಕ್ಕೆ ಹೆಜ್ಜೆಯಿಟ್ಟಿದ್ದಾರೆ.

(೫. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ, (ಸಂ) ಡಾ ನಾರಾಯಣ ಬಿ. ಪವಾರ, ೨೦೧೩, ಪು.೯೨)

ನಾಸು ಕಾದಂಬರಿಯು ಪುರುಷ ಪ್ರಧಾನ ಮೌಲ್ಯಗಳ ಜಗತ್ತು ಮತ್ತು ಅಮಾನವೀಯ ಅಂತಃಕರಣ, ಸೇವಾಪ್ರಧಾನವಾದ ಸ್ತ್ರೀ ಈ ಎರಡು ಜಗತ್ತುಗಳನ್ನು ಮುಖಾಮುಖಿಗೊಳಿಸುತ್ತದೆ.ಝುವಾರಿ ಇವರ ಎರಡನೇಯ ಕಾದಂಬರಿ.ಇಲ್ಲಿ ನೇರವಾದ ಸ್ತ್ರೀ ಪುರುಷ ಸಂಬಂಧಗಳ ಏರಿಳಿತಗಳನ್ನು ನಿರೂಪಿಸಿದ್ದಾರೆ. ನಲುಗದ ದಾಂಪತ್ಯದಲ್ಲೂ ತಲೆದೋರುವ ವಿರಸವನ್ನು ಎದದುರಿಸುವುದರಲ್ಲಿ ಪತ್ನಿತಾಳುವ ನಿಲುವು ಮತ್ತು ಪತಿಯ ಮನೆಯವರೇ ಸಂಶಯಿತ ಪತ್ನಿಯ ಪರವಾಗಿ ನಿಲ್ಲುವುದರಲ್ಲಿ ಲೇಖಕಿಯ ತಂತ್ರವಿದೆ.ಝುವಾರಿ ಕಾದಂಬರಿ ಸ್ತ್ರೀ ಗಟ್ಟಿತನ ಬಿಂಬಿಸುವ ಕಾದಂಬರಿಯಾಗಿದೆ.ಕಾಯಕವೇ ಕೈಲಾಸ ಕಾದಂಬರಿ ಬಸವಣ್ಣನ ತತ್ವಗಳನ್ನು ಸಾರುವ ವಸ್ತುವನ್ನ ಒಳಗೊಂಡು ರಚಿತವಾಗಿರುವ ಕಾದಂಬರಿಯಾಗಿದೆ.

ಹೊಸ ತಲೆಮಾರಿನ ಕಾದಂಬರಿಕಾರ್ತಿಯಾಗಿ ಗುರುತಿಸಿಕೊಂಡಿರುವ ಡಾ.ಆರತಿ ವೆಂಕಟೇಶ್ ಅವರು ವೃತ್ತಿಯಲ್ಲಿ ವೈದ್ಯರು. ತಾಯಿ ಉಷಾನವರತ್ನರಾಮ್. ಇವರ ಕಾದಂಬರಿಗಳನ್ನು ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಇವರ ಪ್ರಮುಖ ಕಾದಂಬರಿಗಳೆಂದರೆ ಕಾರ್ಮುಗಿಲ ತಾರೆ, ಸಮಾನಾಂತರ ರೇಖೆಗಳು, ವಿದಾಯ, ಬೆಡ್ ನಂ ೬,

ರಾಶಿ ಮುಂತಾದವುಗಳು. ಇವರ ನಾಳೆಗಳು ಬರಲಿ ಕಾದಂಬರಿ ದುಡಿವ ಹೆಣ್ಣೊಬ್ಬಳು ಮನೆ, ಗಂಡ, ಮಗಳು ಸಂಬಂಧಗಳನ್ನೆಲ್ಲಾ ಹೆಚ್ಚು ಅಂಟಿಸಿಕೊಳ್ಳದೆ ಕೇವಲ ಆಡಂಬರಗಳ ಹಿಂದೆ ಬಿದ್ದಾಗ ಅಂತಹ ಕುಟುಂಬ ಹೇಗೆ ನಾಶವಾಗುತ್ತದೆ ಎಂಬುದನ್ನ ತಿಳಿಸುತ್ತದೆ. ಸ್ತ್ರೀ ಸಮುದಾಯದಲ್ಲಿ ಬದಲಾಗುತ್ತಿರುವ ಸಾಮಾಜಿಕ ಚಿಂತನೆ ಮತ್ತು ಮೌಲ್ಯಗಳ ಮಂಥನವನ್ನು ಆರತಿ ವೆಂಕಟೇಶ್ ಅವರ ಕಾದಂಬರಿಗಳು ಕೇಂದ್ರೀಕರಿಸಿವೆ. ಉದ್ಯೋಗಸ್ಥ ದಂಪತಿಗಳ ಜೀವನ ಮತ್ತು ಸಮಸ್ಯೆಗಳನ್ನು ಇವರ ಕಾದಂಬರಿಗಳು ಚಿತ್ರಿಸುತ್ತವೆ.

“ಒಟ್ಟಾರೆಯಾಗಿ ಮಹಿಳಾ ಸಾಹಿತ್ಯವನ್ನು ಅವಲೋಕಿಸಿದಾಗ ಕೃತಿಯ ಮುಖ್ಯ ಆಶಯ ಮಾತ್ರ ಹೆಣ್ಣಿನ ಸುತ್ತ ಮುತ್ತಲಿನ ಸಮಸ್ಯೆಯೇ ಆಗಿರುತ್ತದೆ. ಅದು ಭಿನ್ನ ಭಿನ್ನ ನೆಲೆಗಟ್ಟಿನಲ್ಲಿ ಅಥವಾ ಆಯಾಮದಲ್ಲಿ ಅಭಿವ್ಯಕ್ತಗೊಂಡಿರಬಹುದು, ಸ್ವತಂತ್ರ ಪೂರ್ವದ ಲೇಖಕಿಯರ ಉದ್ದೇಶ ಬದಲಾಣೆ ತರುವುದಾಗಿತ್ತು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಯ ವಿರುದ್ಧ ಜಾಗೃತಿಯನ್ನುಂಟು ಮಾಡುವ ಸಾಹಿತ್ಯ ಸೃಷ್ಟಿ ನಡೆಯಿತು. ಹಾಗಾಗಿ ಸ್ತ್ರೀ ಕೇಂದ್ರಿತ ಕಾಳಜಿಗಳೇ ಪ್ರಮುಖವಾಗಿದ್ದವು. ಆಗ ಶಿಕ್ಷಣ ಪಡೆದವರೆಲ್ಲ ಸಾಹಿತಿಗಳಾಗಿರಲಿಲ್ಲ ಆದರೂ ಲೇಖಕಿಯರಾದ ಕೆಲವೇ ಮಂದಿ ಮಹತ್ವದ ಸಾಧನೆ ಮಾಡಿ ಮುಂದಿನ ಪೀಳಿಗೆಗೆ ದಾರಿ ಮಾಡಿ ಕೊಟ್ಟಿದ್ದಾರೆ”.೬ ವಿದ್ಯಾವಂತ ಮಹಿಳಾ ವರ್ಗ ಹೆಚ್ಚಾದರೂ ಸಂಪ್ರದಾಯಿಕ ಚೌಕಟ್ಟಿನಲ್ಲೇ ಅವರ ಭಾವನೆಗಳು ಮುಂದುವರೆದವು. ನೇರವಾದ ಪ್ರತಿರೋದದ ಬದಲಿಗೆ ತಣ್ಣನೆಯ ಪ್ರತಿರೋದವನ್ನು ಕೂಡ ಮಹಿಳಾ ಸಾಹಿತ್ಯ ಒಳಗೊಂಡಿದೆ. ಬರುಬರುತ್ತ ಮಹಿಳೆ ವಿದ್ಯಾವಂತಳಾಗಿ ದುಡಿಮೆಗೆ ಸಿದ್ಧಳಾಗಿದ್ದಾಳೆ, ಆದರೆ ಅವಳ ದುಡಿಮೆಯಿಂದ ಅವಳ ಅರ್ಥಿಕ ಸ್ವತಂತ್ರ ಪರಿಪೂರ್ಣ ಸಾಧಿಸಲ್ಪಟ್ಟಿದ್ದೇವೆ ಎಂಬುದು ಇಂದಿಗೂ ಪ್ರಶ್ನೆಯಾಗಿದೆ. ಹೀಗಾಗಿ ಈ ಅವಧಿಯ ಸಾಹಿತ್ಯ ಕೌಟುಂಬಿಕ ನೆಲೆಯಲ್ಲಿ ತನ್ನ ಅಸೆಯನ್ನು ಅದುಮಿಟ್ಟುಕೊಂಡು ತ್ಯಾಗಮಯಿ ಎಂಬ ಹೆಸರು ಪಡೆದುಕೊಳ್ಳುವ ಪರಿಯವುಗಳಾಗವೆ.

(೬.ಮಹಿಳಾ ಸಾಹಿತ್ಯ, ಡಾ. ಅಕ್ಕಮಹಾದೇವಿ, ಚೇತನ ಬುಕ್ ಹೌಸ್, ೨೦೧೧, ಪು.೧೬೧)

ಎಪ್ಪತ್ತರ ದಶಕದ ನಂತರ ಮಹಿಳ ಸಾಹಿತ್ಯದಲ್ಲಿ ಬೀಸಿದ ಹೊಸ ಅಲೆಯು ಮಹಿಳಾ ಅಭಿವ್ಯಕ್ತಿಯಲ್ಲಿ ಹೊಸ ದಾರಿಗಳನ್ನ ಸಾದರಡಿಸಿತು.ತನ್ನ ಅಭಿವ್ಯಕ್ತಿಯ ನೆಲೆಯಲ್ಲಿ ಮೌನಿಯಾಗಿದ್ದ ಸ್ತ್ರೀ ಪುರುಷನಷ್ಟೇ ಸಮಾನವಾದ ಗೌರವ ಮತ್ತು ಸ್ಥಾನವನ್ನು ಪಡೆದುಕೊಂಡಳು. ಮಹಿಳಾ ಅಭಿವ್ಯಕ್ತಿಗಳಿಗೆ ಪರಿಪೂರ್ಣತೆಯ ಸ್ಥಾನ ಮಹಿಳಾ ಸಾಹಿತ್ಯದಲ್ಲಿ ದೊರಕಿದೆ. ಆದರೂ ಆಧುನಿಕತೆ ಯುಗದಲ್ಲಿ ಮಹಿಳಾ ಶೋಷಣೆ ಭಿನ್ನ ಭಿನ್ನ ನೆಲೆಯಲ್ಲಿ ಹಾಗೆ ಉಳಿದು ಮುಂದುವರೆಯುತ್ತಿದೆ. ಈ ನೆಲೆಯಲ್ಲಿ ಅಲೋಚನೆಗೆ ಮಾಡಿದಾಗ ಮಹಿಳಾ ಅಭಿವ್ಯಕ್ತಿಗಳಿಗೆ ಭಾಗಶಃ ಪೂರ್ಣದ ಯೋಗ ಮಾತ್ರ ದಕ್ಕಿರುವುದನ್ನ ನಾವು ಗಮನಿಸಬಹುದಾಗಿದೆ.

ಆಧುನಿಕ ಕಾಲದಲ್ಲಿ ಮಹಿಳಾ ಕಾದಂಬರಿಯು ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ಸಾಗುತ್ತಿದ್ದು ಪ್ರಖರ ಸ್ತ್ರೀತ್ವದ ಮಾದರಿಗಳನ್ನು ಇತ್ತೀಚಿನ ಲೇಖಕಿಯರು ಸೃಷ್ಟಿಸುತ್ತಿರುವುದನ್ನು ಕಾಣಬಹುದಾಗಿದೆ. ಡಾ.ಬಿ.ಎನ್. ಸುಮಿತ್ರಾಬಾಯಿಯವರು ಇಂದಿನ ಕಾದಂಬರಿಗಾರ್ತಿಯರು ಸೃಷ್ಟಿಸಬೇಕಿರುವ ಪಾತ್ರಗಳನ್ನು ಕುರಿತು “ಚಿನಕುರುಳಿಗಳಂತೆ ಅಲ್ಲಲ್ಲಿ ಸಿಡಿಯುತ್ತಿರುವ, ಮಿಂಚು ಹುಳುಗಳಂತೆ ಮಿನುಗುತ್ತಿರುವ ಶಕ್ತಿ ಸಾಂದ್ರೀಕೃತವಾಗಬೇಕಾಗಿದೆ. ಆತುರದ ಅಗತ್ಯವಿಲ್ಲದ ಹೊಳೆಯಬೇಕೆಂಬ ಅವಶ್ಯಕತೆಯಿಲ್ಲದ ತನ್ನಷ್ಟಕ್ಕೆ ತಾನೇ ಆಗುವುದರ ಹೊರತು ಬೇರಾರೂ ಆಗಬೇಕಾದ ಅವಶ್ಯಕತೆಯಿಲ್ಲದ ಪರಿಪೂರ್ಣ ಸ್ತ್ರೀಯರ ಸೃಷ್ಟಿ

ಆಗಬೇಕಿದೆ”೭ಎನ್ನುತ್ತಾರೆ. (೭.ಡಾ. ಬಿ.ಎನ್. ಸುಮಿತ್ರಾಬಾಯಿ, ‘ಸಾಹಿತ್ಯ ಮತ್ತು ಸ್ತ್ರೀತ್ವದ ಶೋಧನೆ’ (ಲೇಖನ), ವಿಚಯ, ಪು. ೩೫).

**ಗ್ರಂಥ ಋಣ :**


೧. ಹರಿಕೃಷ್ಣಭರಣ್ಯ, ಹೊಸಗನ್ನಡ ಸಾಹಿತ್ಯ ಉಗಮ ಮತ್ತು ವಿಕಾಸ, ಸಪ್ನ ಬುಕ್ ಹೌಸ್, ೨೦೧೬.

೨. ಬಿ ವೆಂಕಟಾಚಾರ್ಯರು, ದುರ್ಗೇಶ ನಂದಿನಿ, ವಿಜ್ಞಾಪನೆ, ೧೯೮೫.

೩. ಯು.ಆರ್.ಅನಂತಮೂರ್ತಿ, ಪ್ರಜ್ಞೆ-ಪರಿಸರ ಪ್ರಜ್ಞೆ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪.

೪. ಡಿ.ಆರ್. ನಾಗರಾಜ್, ಕನ್ನಡ ಕಾದಂಬರಿ ಪರಂಪರೆ ಮತ್ತು ಕಾರಂತರು (ಡಾ.ಜಿ.ಎಸ್.ಶಿವರುದ್ರಪ್ಪ (ಸಂ): ಕಾದಂಬರಿಕಾರರಾಗಿ ಕಾರಂತ), ಪ್ರಸಾರಾಂಗ, ಬೆಂಗಳೂರು ವಿ.ವಿ.೧೯೮೩.

೫. ಮಹಿಳಾ ಸಾಹಿತ್ಯ, ಡಾ. ಅಕ್ಕಮಹಾದೇವಿ, ಚೇತನ ಬುಕ್ ಹೌಸ್, ೨೦೧೧.

೬. ಡಾ. ಬಿ.ಎನ್. ಸುಮಿತ್ರಾಬಾಯಿ, ‘ಸಾಹಿತ್ಯ ಮತ್ತು ಸ್ತ್ರೀತ್ವದ ಶೋಧನೆ’ (ಲೇಖನ), ವಿಚಯ,೧೯೯೫.

೭. ಅರ್ಜುನಪುರಿ ಅಪ್ಪಾಜಿಗೌಡ, ನಂಜನಗೂಡು ತಿರುಮಲಾಂಬಾ ಒಂದು ಅಧ್ಯಯನ